# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ ರಾಣೆಬೆನ್ನೂರು

**ಸಿ.ಸಿ.599/2024**

ಪಿರ್ಯಾಧಿ : ಅಬಕಾರಿ ಉಪ ನಿರೀಕ್ಷಕರು,
ರಾಣೆಬೆನ್ನೂರು ವಲಯ.

**ವಿರುದ್ಧ**

ಆರೋಪಿತರು: ನಾಗರಾಜ ತಂದೆ ಹನುಮಂತಪ್ಪ ಕಕ್ಕರಗೋಳ,
ವಯಸ್ಸುಃ 44 ವರ್ಷ, ವಾಸಃ ಎಕ್ಲಾಸಪುರ,
ತಾಃ ರಾಣೆಬೆನ್ನೂರು, ಜಿಃ ಹಾವೇರಿ.

**ಸಿಆರ್ ಪಿಸಿ ಕಲಂ 313 ಅಡಿಯಲ್ಲಿ ಆರೋಪಿಯ ಹೇಳಿಕೆ**

**ಪ್ರಶ್ನೆ 1 :–** ಸಾಕ್ಷಿದಾರರು ತಮ್ಮ ವಿಚಾರಣೆಯಲ್ಲಿ ಹೇಳಿರುವುದನ್ನು ಕೇಳಿಸಿಕೊಂಡಿದ್ದೀರಾ ?

**ಉತ್ತರ** :–

**ಪ್ರಶ್ನೆ 2 :– ಫ್ರಾಸಾ–1 ಶೀಲಾ ಜಿ.ಕೆ. ಹಾಗೂ ಫ್ರಾಸಾ–3 ಸುಧೀರ್ ಗ್ಯಾಬ್ರಿಯಲ್‌ರವರು ತಮ್ಮ ಸಾಕ್ಷ್ಯದಲ್ಲಿಃ–** ದಿನಾಂಕ 06.05.2024 ರಂದು ಸಂಜೆ ರಾಣೆಬೆನ್ನೂರು ನಗರದಲ್ಲಿ ಗಸ್ತು ಮಾಡುತ್ತಿದ್ದಾಗ ಅಕ್ರಮ ಮದ್ಯ ಸಂಗ್ರಹದ ಬಗ್ಗೆ ಬಾತ್ಮೀದಾರರಿಂದ ಬಂದ ಖಚಿತ ಮಾಹಿತಿಯ ಮೇರೆಗೆ ಯಕ್ಲಾಸಪುರ ಗ್ರಾಮಕ್ಕೆ ಹೋಗಿ ಆರೋಪಿತರಾದ ನಿಮ್ಮ ಮನೆಗೆ ದಾಳಿ ನಡೆಸಿ ಶೋಧನೆ ನಡೆಸಿದಾಗ ನೀವು ಮನೆಯ ಬೆಡ್ ರೂಮಿನ ಮಂಚದ ಕೆಳಗೆ ಅಕ್ರಮವಾಗಿ ಯಾವುದೇ ಪರವಾನಿಗೆ ಇಲ್ಲದೇ ಬಿಳಿ ಚೀಲದಲ್ಲಿ ಮದ್ಯ ಸಂಗ್ರಹ ಮಾಡುತ್ತಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ, **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?**

**ಉತ್ತರ** :–

ಪ್ರಶ್ನೆ 3 :-ಮುಂದುವರೆದು, ಸದರಿ ಚೀಲವನ್ನು ಪರಿಶೀಲಿಸಿದಾಗ 90 ಮಿಲಿಯ 22 ಹೈವಾರ್ಡ್ಸ್ ಚಿಯರ್ಸ್ ವಿಸ್ಕಿ ಟೆಟ್ರಾ ಪ್ಯಾಕುಗಳು ಹಾಗೂ 60 ಮಿಲಿಯ 64 ಓಸಿ ವಿಸ್ಕಿಯ ಟೆಟ್ರಾ ಪ್ಯಾಕ್‌ಗಳು ಇರುವುದು ಕಂಡುಬಂದಿರುತ್ತದೆ. ನಂತರ ಮದ್ಯವನ್ನು

ಅಮಾನತುಪಡಿಸಿಕೊಂಡು, ಪಂಚನಾಮೆ ತಯಾರಿಸಿ, ದೂರು ದಾಖಲಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ .

**ಉತ್ತರ** :–

**ಪ್ರಶ್ನೆ 4 :–ಪ್ರಾಸಾ–4 ಹನುಮಂತಪ್ಪ ಪಟಾತ್‌ರವರು ತಮ್ಮ ಸಾಕ್ಷ್ಯದಲ್ಲಿಃ –** ದಿನಾಂಕ 10.06.2024 ರಂದು ಪ್ರಕರಣದ ಕಡತವನ್ನು ಚಾಸಾ-1 ರವರಿಂದ ಸ್ವೀಕರಿಸಿ, ತನಿಖೆ ಮುಂದುವರೆಸಿ, ಘಟನಾಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಮುದ್ದೆ ಮಾಲನ್ನು ಎಫ್ ಎಸ್‌ಎಲ್‌ಗೆ ಕಳುಹಿಸಿ, ವರದಿ ಪಡೆದು, ರಾಹುತನಕಟ್ಟಿ ಗ್ರಾಮ ಪಂಚಾಯ್ತಿ ಪಿಡಿಓರವರಿಗೆ ಪತ್ರ ಬರೆದು, ತನಿಖೆ ಪೂರ್ಣಗೊಳಿಸಿ ನಿಮ್ಮ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?**

ಉತ್ತರ :-

**ಪ್ರಶ್ನೆ 5 :–** ನಿಮ್ಮ ಪರವಾಗಿ ಏನಾದರೂ ಹೇಳುವುದಿದೆಯಾ?

ಉತ್ತರ :–

**ಪ್ರಶ್ನೆ 6 :–** ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ?

ಉತ್ತರ :–

(**ಮೇಲಿನ ಕಲಂ 313 ಹೇಳಿಕೆಯನ್ನು ಆರೋಪಿತನಿಗೆ ಓದಿ ಹೇಳಿದಾಗ ಆರೋಪಿಯು ನೀಡಿದ ಉತ್ತರವನ್ನು ಯಥವತ್ತಾಗಿ ದಾಖಲಿಸಿಕೊಳ್ಳಲಾಯಿತು**)

ದಿನಾಂಕಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ರಾಣೆಬೆನ್ನೂರು

**ಆರೋಪಿತನ ಸಹಿಃ**